MR DEPUTY SPEAKER .—Mr. Shamanna, there is one more resolution.

SRI T. R. SHAMANNA (fort) .—Sir, I beg to move.

"That this Assembly recommends to Government to take immediate and effective steps to ensure that the mosquito nuisance in Bangalore City is erradicated."

MR. DEPUTY SPEAKER .—Resolution moved

That this Assembly recommends to Government to take immediate and effective steps to ensure that the mosquito nuisance in Bangalore City is eradicated.

This Resolution may be debated at the next opportunity. Ther is a call attention notice which is given notice of by Mr. Banakar, Sri T. M. Manjunath and Sri T. R. Shamanna. When it was called, the Hon'ble Minister was engaged in the other House. He is present now and he is ready to make the statement. I would therefore call upon Mr. Banakar to call the attention of the Hon'ble Minister for Industries.

CALL ATTENTION NOTICE TO A MATTER OF URGENT PUBLIC IMPORTANCE (Contd.)

Re .—Scarcity of cement in the State.

SRI B. G. BANAKAR (Hirekerur) .—Sir, I rise to call the attention of the Hon'ble Minister for Industries regarding the scarcity of Cement in the State.

SRI S. M. KRISHNA (Minister for Industries) .—Sir, I State as follows

1. The licensed capacity for production of cement in Mysore State is about 19 lakh tonnes per year. The actual production has been between 15 and 16 lakhs tonnes. The consumption within Mysore State has been between 8 and 9 lakh tonnes a year. Therefore, in the normal course, there should not be scarcity of cement in the State. But, for a variety of reasons, the problem of shortage of cement has cropped up, In August 1972, there was strike by cement workers all over India. In September, one of the cement factories in the State, had stopped production consequent on strained industrial relations. In October, power cut was imposed. With out break of disturbances in Andhra Pradesh, difficulties in the movement of coal and in wagon availability have aggravated the situation. Heavy power cuts in

Tamil Nadu and Andhra Pradesh have further worsened the situation, as Mysore State lies within the marketing zone of 9 cement factories in Tamil Nadu and one factory in Andhra Pradesh. For all these reasons, the inflow of cement into the State has been affected.

2. The allocation of cement from the various factories is made by the Cement Controller, Government of India, through their regional offices. Since not only in this State but elsewhere also, Governments are stepping up the pace of work on irrigation and other projects speeially in the scarcity affected areas, the allocation of cement to Governmental and semi-Governmental agencies was raised sometime ago by the Cement Controller to 60%. This has inevitably led to reduced availability of cement to the general public This has been unavoidable since, with the over all drop in cement production, higher priority has to be accorded to projects, which are in the public interest

3. Government are aware that with the reduction in supplies, the genuine consumers among the general public are facing difficulties and there are complaints of stockists charging exhorbitant price. Government propose to issue orders under the essential Commodities Act under which the sale of cement to the General public will be regulated through permits. This measure, it is hoped, will ensure the distribution of available supplies of coment in an equitable manner.

ಶ್ರೀ ಬಿ. ಜಿ. ಬಣಕಾರ.— ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿದ್ದಾರೆ. ತಾಲ್ಲೂಕು ಅಭಿವೃದ್ಧಿ ಮಂಡಲಿ, ಪಿ.ಡಬ್ಲ್ಯೂ.ಡಿ ಎಲ್ಲಾ ಸೇರಿ ಅನೇಕ ಕೆಲಸಗಳನ್ನು ಮಾಡಬೇಕಾದ ಅವಶ್ಯಕತೆಯಿದೆ. ಆದರೆ ಸಿಮೆಂಟು ಸಿಕ್ಕುವುದಿಲ್ಲ, ಅದರಿಂದ ಅನೇಕ ಕೆಲಸಕಾರ್ಯ ನಿಂತಿದೆ. ಅನೇಕ ತಾಲ್ಲೂಕುಬೋರ್ಡ್‌ಗಳವರೂ ಸಹ ಇದನ್ನು ಗಮನಕ್ಕೆ ತಂದಿದ್ದಾರೆ. ವಂದ್ರಾಸಿನಲ್ಲಿರುವ ರೀಜಿನಲ್ ಆಫೀಸರಿಗೆ ಅನೇಕ ತಾಲ್ಲೂಕು ಬೋರ್ಡಿನ ಅಧಕಾರಿಗಳು ಇದರ ಬಗ್ಗೆ ಮನವಿ ಮಾಡಿದರೂ ಗಮನಕೊಟ್ಟಿಲ್ಲ. ರಾಜ್ಯದಲ್ಲಿ ಎಲಾ ಕಡೆ ೨೦ ರೂಪಾಯಿ ಪ್ರಕಾರ ಸಿಮೆಂಟು ದೊರೆಯುತ್ತಿದೆ. ಆದರೆ ಎಜೆಂಟರ ಮೂಲಕ ಸರಿಯಾದ ಬೆಲೆಗೆ ದೊರೆಯುತ್ತಿಲ್ಲ. ಬಾಗಲುಕೋಟೆ ಸಿಮೆಂಟು ಕಾರ್ಖಾನೆಯಲ್ಲಿ ಸಾಕಷ್ಟು ಉತ್ಪತ್ತಿಯಿದ್ದರೂ ದೊರೆಯುತ್ತಿಲ್ಲ. ಸರಕಾರದ ಹತೋಟಿ ಇದರ ಮೇಲಿದೆಯೇ ಎಂದು ಪರಿಶೀಲಿಸಬೇಕು. ಸಕ್ಕರೆಗೆ ಯಾವರೀತಿ ಮಾಡಿದ್ದಾರೆ ಆ ರೀತಿ ಮಾಡಿ ಪ್ರತಿಯೊಂದು ಅಭಿವ ದ್ಧಿ ಕಾರ್ಯ ಗಳಿಗೂ ಸಿಮೆಂಟು ದೊರೆಯುವಂತೆ ಹತೋಟಿ ಇಟ್ಟುಕೊಂಡು ವ್ಯವಸ್ಥೆ ಮಾಡುವಿರಾ ?

ಶ್ರೀ ಎಂ. ಎಸ್. ಕೃಷ್ಣನ್.— ಹಿಂದಿನವರ್ಷ ಎಷ್ಟು ಸಿಮೆಂಟು ಉತ್ಪತ್ತಿಯಾಯಿತು, ಈ ವರ್ಷ ಎಷ್ಟಾಗಿದೆ. ಮಿಂದು ತಿಳಿಸಿದರೆ ಒಳ್ಳೆಯದು. ಈ ವರ್ಷ ಹೋದ ವರ್ಷಕ್ಕಿಂತ ಉತ್ಪತ್ತಿ ಜಾಸ್ತಿಯಾಗಿದೆ. ನಿರಡನೆಯದಾಗಿ ಸಿಮೆಂಟಿನ ಮಾಲೀಕತ್ವ ಖಾಸಗಿಯವರಿಗೆ ಹೆಚ್ಚಾಗಿ ಸೇರಿ ಬೆಲೆ ಹೆಚ್ಚಿಸಲು ಅವರು ಸ್ರಯತ್ನಮಾಡುತ್ತಿದ್ದಾರೆ. ಈಗ ಸ್ಟಾಕ್ ಸಾಕಷ್ಟಿದ್ದರೂ ಬ್ಲಾಕ್‌ಮಾರ್ಕೆಟ್ ಮಾಡುತ್ತಿದ್ದಾರೆ. ರಿಲೀಸ್ ಮಾಡುತ್ತಿಲ್ಲ. ಇದರ ಬಗ್ಗೆ ಕ್ರಮವೇನು ತೆಗೆದುಕೊಳ್ಳುವಿರಿ ? ಸಿಮೆಂಟು ಕಾರ್ಖಾನೆ ಸರಕಾರವೆ ನಡೆಸ ಬೇಕು ಎಂದು ಶಿಪಾರಸು ಮಾಡುವಿರಾ ?

ಶ್ರೀ ಟಿ. ಆರ್. ಶಾಮಣ್ಣ.— ಈಗ ಬೆಂಗಳೂರು ನಗರದಲ್ಲಿ ಸಿಮೆಂಟು ಎಷ್ಟು ಬೇಕಾದರೂ ಸಿಕ್ಕುವುದು. ಆದರೆ ಅದರ ಬೆಲೆ ೧೨–೧೮ ಇದ್ದರೆ ೧೭–೨೦ ರೂಪಾಯಿಗೆ ದೊರೆಯುವುದು. ಇದು ಎಲ್ಲರಿಗೂ ಗೊತ್ತಿದೆ. ಕೆಲವು ವರ್ತಕರನ್ನು ಬಿಟ್ಟು ಉಳಿದವರು ಹೆಚ್ಚು ಭಾಗವನ್ನು ಸ್ಟೇಷನ್ನಿನಲೆ ೇ ಮಾರುವುದು ಕಂಡುಬರುತ್ತಿದೆ. ಸಿಮೆಂಟಿಗೆ ಕಂಟ್ರೋಲಿಲ್ಲದ ಜನರಿಗೆ ತೊಂದರೆಯಾಗಿದೆ. ಹೊರಗಡೆ ಹೋಗುವುದನ್ನು ತಪ್ಪಿಸಲು ಸಾಧ್ಯವೇ ? ನಮ್ಮ ಅವಶ್ಯಕತೆಗಿಂತ ಹೆಚ್ಚು ಉತ್ಪತ್ತಿಯಾಗದಿರುವಾಗ ಹೊರಗಡೆ ಕಳಿಸುವುದೇಕೆ ಎಂದು ಯೋಚನೆಮಾಡಬೇಕು. ಪೌರಸಭೆ ಮತ್ತು ಮುನಿಸಿಪಾಲಿಟಿಗಳಿಗೆ ಸರಕಾರಕ್ಕೆ ಕೋಟ ಕೊಡುವಹಾಗೆ ಕೊಡಲು ಸಾಧ್ಯವೇ ? ಕೆಲವರು ವರ್ತಕರು ಸತ್ಯವಂತರು ಅನೇಕರು ಲಾಭ ಹೆಚ್ಚು ಪಡೆಯಲು ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಎಂ. ಬಿ. ರಾವಂಸ್ವಾಮಿ.— ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಪಬ್ಲಿಕ್‌ವರ್ಕ್ಸ್ ಇಲಾಖೆ ಕೆಲಸಗಳು ಸಿಮೆಂಟಿನ ಆಭಾವದಿಂದ ನಿಂತಿರುವುದು ಗೊತ್ತಿರಬಹುದು. ಹೇರಳವಾಗಿ ಸಿಕ್ಕುತ್ತಿದ್ದ ಸಿಮೆಂಟು ಇಂದು ಮಾಯವಾಗಿ ೨೨ ರಿಂದ ೨೫ ರೂಪಾಯಿಗಳವರೆಗೆ ಮಾರಾಟ ಮಾಡುತ್ತಿದ್ದಾರೆ, ಆದುದರಿಂದ ಇರುವ ಸಿಮೆಂಟನ್ನು ಹಂಚಲು ಸರಿಯಾದ ವ್ಯವಸ್ಥೆ ಮಾಡಿ ನೇರವಾಗಿ ತಾಲ್ಲೂಕು ಮತ್ತು ಜಿಲ್ಲಾಧಿಕಾರಿಗಳ ಮೂಲಕ ಹಂಚಲು ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಜಿ. ಎಸ್. ಆಮ್ಮಣ್ಣಾವರ.— ತಾಲ್ಲೂಕು ಬೋರ್ಡಿಗೆ ಕೋಟ ಕೊಡಲು ಬಾಗಲಕೋಟೆ ಫ್ಯಾಕ್ಟರಿಯವರು ೫೦ ರೂಪಾಯಿ ಕೊಡಬೇಕೆಂದು ಹೇಳುತ್ತಿದ್ದಾರೆ ಹಾಗೆ ಹಣ ಕೊಟ್ಟರೆ ಎಲ್ಲಿಂದ ಖರ್ಚು ಹಾಕಬೇಕು ? ಟ್ರಕ್‌ತನ್ನಿ ಎಂದು ಹೇಳುವುದು, ತೆಗೆದುಕೊಂಡು ಹೋದರೆ ಟ್ರೈನಿನಲ್ಲಿ ಕಳಿಸುವು ದಾಗಿ ಹೇಳುವರು. ಪ್ರಸಿಡೆಂಟರು ಈಗಾಗಲೆ ಇದನ್ನು ಮಂತ್ರಿಗಳಿಗೆ ಬರೆದು ತಿಳಿಸಿದ್ದಾರೆ. ಈಗ ಅವರ ಎಜೆನ್ಸಿ ಕ್ಯಾನ್ಸಲ್ ಆಗಿದೆ. ಸಿಮೆಂಟು ವಿತರಣೆ ಮಾಡಲು ವ್ಯವಸ್ಥೆಮಾಡುವಿರಾ ?

ಶ್ರೀ ಎಸ್, ಎಂ, ಕೃಷ್ಣ — ಈ ಸಿಮೆಂಟ್ ವಿತರಣೆ ಬಗ್ಗೆ ಮೈಸೂರು ಸರಕಾರದವರು ಒಂದು ನೀತಿಯನ್ನು ರೂಪಿಸುವುದಕ್ಕೆ ಸಾಧ್ಯವಿಲ್ಲ. ಸಮಗ್ರ ದೇಶದ ದೃಷ್ಟಿಯಿಂದ ರಾಷ್ಟ್ರೀಯ ನೀತಿಯನ್ನು ಈಗ ರೂಪಿಸಲಾಗಿದೆ. ಅದರ ಪ್ರಕಾರ ಸಿಮೆಂಟ ವಿತರಣೆ ಮಾಡಲು ಕೇಂದ್ರದಲ್ಲಿ ಸಿಮೆಂಟ ಅಫಿಸರ್ ಮತ್ತು ರೀಜನಲ್ ಸಿಮೆಂಟ್ ಕಂಟ್ರೋಲರ್ ಇದ್ದಾರೆ, ಅವರು ವಿತರಣೆಯನ್ನು ಸಮನ್ವಯ ಮಾಡುವರು. ಈಗ ನಮ್ಮ ರಾಜ್ಯದಲ್ಲಿ ೧೬ ಲಕ್ಷ ಟನ್ ಸಿಮೆಂಟ್ ಉತ್ಪತ್ತಿ ಮಾಡುವಾಗ ನಮ್ಮ ಆವಶ್ಯಕತೆ ೯–೧೦ ಲಕ್ಷಟನ್ ಇರುವುದರಿಂದ ನಮಗೆ ಬೇಕಾಗುವಷ್ಟು ನಾವು ಉಪಯೋಗಿಸಬಹುದು ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಆದರೆ ಸಿಮೆಂಟ್ ಕಂಪೆನಿಯ ಮೇಲೆ ಮೈಸೂರು ಸರಕಾರಕ್ಕೆ ಯಾವ ವಿಧವಾದ ಹತೋಟಿ ಇಲ್ಲ. ಆದುದರಿಂದ ನಾವು ರಾಷ್ಟ್ರೀಯ ನೀತಿಯ ಕೆಳಗೆ ಹೋಗಬೇಕಾಗಿದೆ. ನಮ್ಮ ಸರಕಾರದವರು ರೀಜನಲ್ ಸಿಮೆಂಟ್ ಕಂಟ್ರೋಲರ್ ಮತ್ತು ಎಲ್ಲಾ ಸಿಮೆಂಟ್ ಕಂಪನಿಗಳೊಡನೆ ಸಮಾಲೋಚನೆ ಮಾಡಿ ನಮ್ಮ ರಾಜ್ಯಕ್ಕೆ ಹೆಚ್ಚು ಆಲಾಟ್ ಮಾಡಬೇಕೆಂದು ಪ್ರತಿಪಾದನೆ ಮಾಡಿದ್ದಾರೆ. ಈಗ ಸಾರ್ವಜನಿಕರಿಗೆ ಸಿಮೆಂಟ್ ಕನ್‌ಸಂಪೆಷನ್‌ಗೆ ತೊಂದರೆಯಾಗಿರುವುದಕ್ಕೆ ಕಾರಣ, ನೆರೆ ರಾಜ್ಯದಲ್ಲಿ ಒದಗಿರತಕ್ಕ ವಿಧ್ಯುಚ್ಛಕ್ತಿಯ ಆಭಾವ ಸಣ್ಣ ಉದಾಹರಣೆ ಕೊಡಬೇಕಾಗಿದ್ದರೆ. ಮೈಸೂರು ರಾಜ್ಯದಲ್ಲಿ ಕ್ವಾಸಿಗವರ್ನಮೆಂಟ್ ರಿಕ್ವೆಯರ್‌ಮೆಂಟ್ಸ್ ಸುಮಾರು ಒಂದು ತಿಂಗಳಿಗೆ ಮೂರು ಸಾವಿರ ಟನ್‌ನವರೆಗೆ ಉಪಯೋಗಿಸುತ್ತಾರೆ. ಇತ್ತೀಚೆಗೆ ಸ್ಕೇರ್ಸಿಟಿ ರಿಲೀಫ್ ವರ್ಕ್ಸ್ ಪ್ರಾರಂಭವಾದ ಮೇಲೆ ಸೆಮಿ ಗವರ್ನಮೆಂಟ್ ಮತ್ತು ಕ್ವಾಸಿ ಗವರ್ನಮೆಂಟ್ ರಿಕ್ವಯರ್‌ಮೆಂಟ್ಸ್ ೪೦ ರಿಂದ ೫೦ ಸಾವಿರ ಟನ್‌ವರೆಗೂ ಜಾಸ್ತಿಯಾಗಿದೆ. ಇದು ಜಾಸ್ತಿಯಾದ ಮೇಲೆ ಪಬ್ಲಿಕ್ ಕೋಟಾ ಕಡಿಮೆಯಾಗಿದೆ. ಆದ್ದರಿಂದ ತೊಂದರೆಯಾಗಿದೆ, ಆದ್ದರಿಂದ ನಾವು ಸಿಮೆಂಟ್ ಕಂಟ್ರೋಲ್ ಆರ್ಡರ್ ಅನ್ನು ಜಾರಿಗೆ ತರತಕ್ಕ ಉದ್ದೇಶವಿದೆ. ಈಗ ಉದ್ಭವವಾಗಿರತಕ್ಕ ಪರಿಸ್ಥಿತಿಯನ್ನು ಕೆಲವು ಜನ ಸ್ಟಾಕಿಸ್ಟ್ಸ್‌ಟ್ಟ ಮತ್ತು ಡಿಲರ್ಸ್ ದುರುಪಯೋಗಪಡಿಸಿಕೊಂಡು ಜನಗಳನ್ನು ಶೋಷಣೆ ಮಾಡಿದ್ದಾರೆ. ಇದಕ್ಕೆ ಅವಕಾಶ ಕೊಡುವುದು ನ್ಯಾಯವಲ್ಲ ಈ ದೃಷ್ಟಿಯಿಂದ ಇನ್ನು ಮೇಲೆ ಪ್ರತಿಯೊಬ್ಬ ಸ್ಟಾಕಿಸ್ಟ್ಸ್‌ನು ಸರ್ಕಾರದಿಂದ ಲೈಸನ್ಸ್ ಅನ್ನು ಪಡೆದುಕೊಂಡು ಸಿಮೆಂಟಿನ್ನು ವಿತರಣೆ ಮಾಡಬೇಕಾಗುತ್ತದೆ. ಜೊತೆಗೆ ಪ್ರೈಸ್ ಅನ್ನೂ ಫಿಕ್ಸ್ ಮಾಡುತ್ತೇವೆ. ಇದರಿಂದ ಅವನು ಸ್ಟಾಕ್ ಬೋರ್ಡು ಹಾಕಿ ಇಷ್ಟು ಸ್ಟಾಕು ಇದೆ ಇದೆ ಯೆಂದು ಜನಗಳಿಗೆ ತಿಳಿಸಬೇಕಾಗುತ್ತದೆ. ಇದರಿಂದ ಸಿಮೆಂಟಿನ ಉತ್ಕಟ ಪರಿಸ್ಥಿತಿ ಏನು ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ ಅದನ್ನು ಸ್ವಲ್ಪಮಟ್ಟಿಗೆ ಸುಧಾರಿಸಬಹುದು ಎಂದು ನಾವು ಆಶೆ ಮಾಡುತ್ತೇವೆ, ಎಂದೂ ಈ ಸಭೆಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮತ್ತು ಈ ಸಿಮೆಂಟ್ ಅಭಾವ ಎಲ್ಲಿಯವರೆಗೆ ಪವರ್ ಅಭಾವ ಇರುತ್ತದೆಯೋ ಅಲ್ಲಿಯವರೆಗೆ ನಮ್ಮ ದೇಶದಲ್ಲಿ ಸಿಮೆಂಟಿನ ಅಭಾವವು ಮುಂದುವರಿಯುತ್ತದೆ, ಎನ್ನುವುದರಲ್ಲಿ ಯಾರೂ ಸಂಶಯ ಪಡಬೇಕಾಗಿಲ್ಲ ಜೂನ್ ತಿಂಗಳ ಹೊತ್ತಿಗೆ ಇದು ಸಂಪೂರ್ಣವಾಗಿ ಹತೋಟಿಗೆ ಬರಬಹುದು ಎಂದು ನನಗನ್ನಿಸುತ್ತದೆ. ನಮ್ಮ ಮಾನ್ಯ ಸದಸ್ಯರು ಬಾಗಲಕೋಟೆಯ ಸಿಮೆಂಟ್ ಕಂಪನಿಯ ವಿಚಾರದಲ್ಲಿ ಕೆಲವು ವಿಚಾರಗಳನ್ನು ತಿಳಿಸಿದಾರೆ. ಇದರ ಬಗ್ಗೆ ಸರ್ಕಾರದವರು ತನಿಖೆ ಮಾಡುತ್ತಾರೆ, ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಹತೋಟಿಯಲ್ಲಿ ಇಲ್ಲ ಎಂದು ಹೇಳಿದಿರಿ ?

ಶ್ರೀ ಎಸ್. ಎಂ. ಕ ಷ .— ಸಿಮೆಂಟ್ ಕಂಟ್ರೋಲ್ ಆರ್ಡರ್ ಜಾರಿಗೆ ಬಂದತಕ್ಷಣ ತನಿಖೆ ಮಾಡುತ್ತೇವೆ.